ಅಸಲು ದಾವಾ ನಂ. 05/2021
ಪಿ ಡಬ್ಲು-1

ದಿನಾಂಕ 22-08-2025 ರ ಆದೇಶದ ಮೇರೆಗೆ ಪಿಡಬ್ಲು-1 ಇವರನ್ನು ಸಾಕ್ಷ್ಯ ನುಡಿಯಲು ಪುನಃ ಕರೆ ಕಳುಹಿಸಲಾಯಿತು.

ದಿನಾಂಕಃ 21-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ- ಪ್ರತಿವಾದಿ ಪರ ಶ್ರೀ. ಎಫ್ ಎನ್ ಎನ್ ವಕೀಲರಿಂದ.**

ಸರ್ವೆ ನಂ.31/6 ಇದು ನನ್ನ ಗಂಡ ಸುಭಾಷ ಇವರ ತಂದೆಯಿಂದ ಬಂದಿರುತ್ತದೆ ಎಂದು ತೋರಿಸಲು ಯಾವುದೇ ಕಾಗದ ಪತ್ರ ಹಾಜರುಪಡಿಸಿಲ್ಲ. ದಾವಾ ಆಸ್ತಿಗಳು ಹಿರಿಯರಿಂದ ಬಂದ ಆಸ್ತಿಗಳು ಎಂದು ತೋರಿಸಲು ಪಹಣಿಗಳನ್ನು ಹಾಜರುಪಡಿಸಿರುತ್ತೇನೆ. ಪಹಣಿ ಹೊರತುಪಡಿಸಿ ಬೇರೆ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ಪಹಣಿ ಬಿಟ್ಟು ಬೇರೆ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ದಾವಾ ಆಸ್ತಿ ಜಮೀನು ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದು ಅವರ ಸ್ವಸಂಪಾದಿತ ಆಸ್ತಿ ಎಂದರೆ ಸರಿಯಲ್ಲ. ನಿಪಿ-3 ರ ಪಹಣಿಯು ಈ ದಾವಾ ಆಸ್ತಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. ನಿಪಿ-3 ಒಬ್ಬ ಹೊನ್ನಪ್ಪ ರಾಮಪ್ಪ ಕಾಳಪ್ಪನವರ ಇವರಿಗೆ ಸಂಬಂಧಿಸಿದ ಆಸ್ತಿ ಎಂದರೆ ಸರಿಯಲ್ಲ. ಅದು ಪ್ರತಿವಾದಿಗಾಗಲೀ, ಅವನ ತಂದೆ ಹನುಮಂತಪ್ಪ ಇವರಿಗಾಗಲೀ ಸಂಬಂಧಿಸಿದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ಹೊನ್ನಪ್ಪ ಇವರಿಗೆ ಸದರಿ ಜಮೀನು ಹೇಗೆ ಬಂದಿರುತ್ತದೆ ಎಂದು ತೋರಿಸಲು ಕಾಗದ ಪತ್ರ ಹಾಜರುಪಡಿಸಿರುತ್ತೇನೆ. ಹಾಗೇ ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಹೊನ್ನಪ್ಪ ಪ್ರತಿವಾದಿಗೆ ಏನು ಸಂಬಂಧ ಹೊಂದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಸ್ವಸಂಪಾದಿತ ಆಸ್ತಿಗಳಲ್ಲಿ ನನಗೆ ಯಾವುದೇ ಪಾಲು ಇಲ್ಲ ಎಂದರೆ

ಸರಿಯಲ್ಲ. ನಾನು ದಾವಾ ಆಸ್ತಿಗಳಲ್ಲಿ ಪಾಲು ಪಡೆಯುವ ಉದ್ದೇಶದಿಂದ ಅವು ಪಿತ್ರಾರ್ಜಿತ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).